

ಮುಂದೆ ನಿಂತು ತಮ್ಮನ್ನು ತಾವು ನೋಡಿಕೊಂಡರು. ಅರವತ್ತು ದಾಟಿದ್ದರೂ ಇನ್ನೂ ನಲವತ್ತರ ಹುಡುಗನಂತೆ ಕಾಣುವ ತಮ್ಮ ಮುಖ ಮತ್ತು ಮೈಕಟ್ಟು ನೋಡಿ ಸಣ್ಣದಾಗಿ ಮುಗಳ್ನಕ್ಕರು. ಒಡನೆಯೇ ಅವರು ತಮ್ಮ ಆತ್ಮಚರಿತ್ರೆ ಮತ್ತು ಜೀವನಚರಿತ್ರೆ ಎರಡೂ ನೆನೆದು ದುಃಖಿತರಾದರು.

ಪತ್ರಕರ್ತ ಮಂತ್ರಿಗಳ ನಿಜವಾದ ಜೀವನದ ಅನೇಕ ಕರಾಳ ಮುಖಗಳನ್ನು ನೇರವಾದ ಭಾಷೆಯಲ್ಲಿ ಸಚಿತ್ರವಾಗಿ ಬಿಚ್ಚಿಟ್ಟಿದ್ದ. ಆತ್ಮಚರಿತ್ರೆಯಲ್ಲಿ ಮಂತ್ರಿ ಕಟ್ಟಿಕೊಟ್ಟ ತನ್ನ ಬದುಕಿನ ಸುಂದರ ಚಿತ್ರಣವನ್ನು ಜೀವನಚರಿತ್ರೆಯಲ್ಲಿ ಪತ್ರಕರ್ತ ಸರ್ವನಾಶ ಮಾಡಿ ಬಿಟ್ಟಿದ್ದ! ಮಂತ್ರಿಗಳ ನಿಜಜೀವನವನ್ನು ಸರಳವಾಗಿ, ಸುಂದರವಾಗಿ ಕಟ್ಟಿಕೊಟ್ಟಿದ್ದ. ಮಂತ್ರಿಗಳ ಹಗರಣಗಳ ಬಗೆಗೆ, ಅವರ ಭ್ರಷ್ಟಾಚಾರದ ಬಗೆಗೆ, ಅವರ ಅವ್ಯವಹಾರಗಳ ಬಗೆಗೆ, ಅನೈತಿಕ ಪ್ರಕರಣಗಳ ಬಗೆಗೆ ವಿಸ್ತೃತವಾಗಿ ಬರೆದು ಪ್ರತಿಯೊಂದು ಆರೋಪ ದೃಢಪಡಿಸಲು ಮಹತ್ವದ ದಾಖಲೆಗಳನ್ನು, ಪುರಾವೆಗಳನ್ನು ನೀಡಿದ್ದ. ಈ ಪುಸ್ತಕದ ಆಧಾರದ ಮೇಲೆಯೇ ನ್ಯಾಯಾಲಯ ಮಂತ್ರಿಗಳಿಗೆ ಮರಣದಂಡನೆ ನೀಡಬಹುದು. ಈ ಪುಸ್ತಕ ಓದಿದರೆ ಜನರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ತಮಗೆ ಸಾಧ್ಯವಿಲ್ಲವೆಂದು ಮಂತ್ರಿಗಳಿಗೆ ಮನವರಿಕೆಯಾಯಿತು. ಪುಸ್ತಕದಲ್ಲಿ ಲೇಖಕ ಮತ್ತು ಪ್ರಕಾಶಕರ ದೂರವಾಣಿ ಸಂಖ್ಯೆಗಳು ಅಚ್ಚಾಗಿದ್ದವು. ಪತ್ರಕರ್ತ ಲೇಖಕನಿಗೆ ಕರೆ ಮಾಡಲು ಮಂತ್ರಿಗಳಿಗೆ ಧೈರ್ಯ ಸಾಕಾಗಲಿಲ್ಲ. ಆದರೆ, ಪ್ರಕಾಶಕಗೆ ಕರೆ ಮಾಡಿ 'ನೀವು ಪ್ರಕಟಿಸಿದ ಜೀವನಚರಿತ್ರೆ ಓದಿದೆ. ಈ ಪುಸ್ತಕದ ಪ್ರತಿಗಳು ನಿಮ್ಮ ಹತ್ತಿರ ಇವೆಯೆ?' ಎಂದು ಕೇಳಿದರು. 'ಇವೆ ಸರ್. ಲೇಖಕರು ನೂರು ಪ್ರತಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಆದರೆ, ಈ ಪುಸ್ತಕ ವಿಧ್ಯುಕ್ತವಾಗಿ ಇನ್ನೂ ಬಿಡುಗಡೆಯಾಗಿಲ್ಲ. ತಾವು ಸೂಚನೆ ನೀಡುವವರೆಗೆ ಮಾರಾಟ ಶುರು ಮಾಡಬೇಡಿ ಎಂದು ಲೇಖಕರು ಹೇಳಿದ್ದಾರೆ' ಎಂದು ಪ್ರಕಾಶಕರು ಹೇಳಿದರು. 'ನೇರವಾಗಿ ವಿಷಯಕ್ಕೆ ಬರುತ್ತೇನೆ. ಈ ಜೀವನಚರಿತ್ರೆಯಲ್ಲಿ ನಿಮ್ಮ ಲೇಖಕ ನನ್ನ ಮಾನ, ಮರ್ಯಾದೆ ತೆಗೆದಿದ್ದಾನೆ. ನೀವು ಈ ಪುಸ್ತಕದ ಪ್ರತಿಗಳನ್ನು ಸುಟ್ಟು ಹಾಕುವುದಾದರೆ ಮುದ್ರಣಕ್ಕೆ ಖರ್ಚು ಮಾಡಿದ ಹಣಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ಕೊಡುತ್ತೇನೆ' ಎಂದರು ಮಂತ್ರಿಗಳು. ಮಂತ್ರಿಗಳ ಮಾತಿಗೆ ಕಿರಿದಾಗಿ ನಕ್ಕು 'ಸರ್, ಈಗಲಾದರೂ ಎಚ್ಚೆತ್ತುಕೊಳ್ಳಿ. ನೀವು ಮುದ್ರಿತ ಪ್ರತಿಗಳನ್ನು ಸುಟ್ಟು ಹಾಕಬಹುದು, ಲೇಖಕನ ಮಿದುಳನ್ನಲ್ಲ. ಹಣಕ್ಕಾಗಿ ನನ್ನ ವೃತ್ತಿಧರ್ಮ ಸುಡಲು ನಾನು ಸಿದ್ಧನಿಲ್ಲ. ಅಲ್ಲದೆ, ಲೇಖಕರ ಹತ್ತಿರ ಈ ಪುಸ್ತಕದ ಸಾಫ್ಟ್ ಕಾಪಿ ಇದೆ. ಅವರು ಬೇರೆ ಪ್ರಕಾಶಕರಿಂದ ತಮ್ಮ ಪುಸ್ತಕ ಪ್ರಕಟಿಸುತ್ತಾರೆ. ವಿದ್ವತ್ ಜಗತ್ತಿನಲ್ಲಿ ರಾಜಕಾರಣ ನಡೆಯುವುದಿಲ್ಲ. ನೀವು ಬಾಡಿಗೆ ಲೇಖಕರಿಂದ ನಿಮ್ಮ ಆತ್ಮಚರಿತ್ರೆ ಬರೆಯಿಸಿದ್ದೀರಿ. ಅದರ ಕುರಿತೇ ಒಂದು ಅಧ್ಯಾಯ ಈ ನಿಮ್ಮ ಜೀವನಚರಿತ್ರೆಯಲ್ಲಿದೆ. ಒಬ್ಬ ಲೇಖಕನನ್ನು ಖರೀದಿಸಬಹುದು, ಪ್ರತಿಯೊಬ್ಬ ಲೇಖಕನನ್ನಲ್ಲ! ಇಂಥ ಪ್ರಯತ್ನ ಮಾಡಬೇಡಿ. ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳಿ' ಎಂದು ಹೇಳಿ ಪ್ರಕಾಶಕರು ಕರೆ ಕಟ್ ಮಾಡಿದರು.

ಮೊಬೈಲ್ ಮೇಜಿನ ಮೇಲಿಟ್ಟು ಮಂತ್ರಿಗಳು ಕಿಟಕಿಯ ಹೊರಗೆ ನೋಡಿದರು. ಅಮಾವಾಸ್ಯೆ ಸಮೀಪಿಸಿದ್ದರಿಂದ ಆಕಾಶದಲ್ಲಿ ಚುಕ್ಕೆಗಳು ಮಾತ್ರ ಕಂಡವು. ಚುಕ್ಕೆಗಳ ಮಿಣುಕು ಬೆಳಕಿನಲ್ಲಿ ಮಂತ್ರಿಗಳ ಅಂತರಂಗದ ಕಲ್ಮಶ ಅವರ ಬರಿಗಣ್ಣಿಗೆ ಕಾಣಲಿಲ್ಲ. ಪತ್ರಕರ್ತನ ಮನೆ ಎಲ್ಲಿದೆ ಎಂದು ಗೊತ್ತು. ಅವನ ಮನೆಗೆ ಹೋಗಿ ಪಿಸ್ತೂಲಿನಿಂದ ಅವನನ್ನು ಸುಟ್ಟು ಅವನ ಮನೆಯಲ್ಲಿನ ನೂರು ಪ್ರತಿಗಳನ್ನು ತೆಗೆದುಕೊಂಡು ಪ್ರಕಾಶಕರ ಮನೆಗೆ ಹೋಗಿ, ಹತ್ತು ಪಟ್ಟು ಹೆಚ್ಚಿನ ದರ ಕೊಟ್ಟು ಪ್ರಕಾಶಕರಿಂದ ಉಳಿದ ಪ್ರತಿಗಳನ್ನು ಖರೀದಿಸಿಕೊಂಡು ಬಂದರೆ ತಮ್ಮ ಗೌರವ ಕಾಪಾಡಿಕೊಳ್ಳಬಹುದು ಎಂದುಕೊಂಡರು. 'ಆದರೆ, ಇದು ಸುಲಭದ ಕೆಲಸವಲ್ಲ. ಈ ಪತ್ರಕರ್ತ ಸಾಮಾನ್ಯ ವ್ಯಕ್ತಿಯಲ್ಲ. ಇಪ್ಪತ್ತು ವರ್ಷಗಳಲ್ಲಿ ನೂರಾರು ಸಲ ನನ್ನ